# ಬಿಲ್ಡಪ್ಪುಗಳೆಲ್ಲ ನಂಗಾಗಲ್ಲ...

ಹಾಸ್ಯನಟರು ಸಿದ್ಧಸೂತ್ರಗಳ ಕನ್ನಡ ಚಿತ್ರಗಳಲ್ಲಿ ಗಿರಕಿ ಹೊಡೆಯುತ್ತಿರುವಾಗ ಹೊಸ ಬಗೆಯ ಮ್ಯಾನರಿಸಮ್‌ನಿಂದ ಗಮನಸೆಳೆದವರು ಧರ್ಮಣ್ಣ. 'ರಾಮಾ ರಾಮಾ ರೇ' ಚಿತ್ರದಿಂದ ಶುರುವಾದ ಇವರ ಸಿನಿಮಾಪಯಣ ದಿನದಿಂದ ದಿನಕ್ಕೆ ವಿಸ್ತಾರಗೊಳ್ಳುತ್ತಲೇ ಇದೆ.

■ ಪದ್ಮನಾಭ ಭಟ್



◆ **ಹಾಸ್ಯನಟ ಆಗಬೇಕು ಎಂದು ನಿರ್ಧರಿಸಿಕೊಂಡೇ ನೀವು ನಟನೆಗೆ ಇಳಿದಿದ್ದಾ?**

ಹಾಗೇನಿರಲಿಲ್ಲ. ಚಿಕ್ಕಂದಿನಿಂದ ನಾನೇ ಬರೆದುಕೊಂಡು ಸ್ಕಿಟ್‌ಗಳನ್ನು ಮಾಡ್ತಿದ್ದೆ. ಅವೆಲ್ಲ ಹಾಸ್ಯಪ್ರಧಾನವಾದವವು. ಬಹುಶಃ ಆಗಿನಿಂದಲೇ ನನ್ನೊಳಗೊಬ್ಬ ಕಮಿಡಿಯನ್ ಇದ್ದ; ಆದರೆ ನನಗೆ ಗೊತ್ತಿರಲಿಲ್ಲ ಅಷ್ಟೆ. ಡಿಗ್ರಿ ಮುಗಿಸಿದ ಮೇಲೆ ಯಶವಂತ ಸರದೇಶಪಾಂಡೆ ತಂಡಕ್ಕೆ ಸೇರಿಕೊಂಡೆ. ಅವರ ಎಲ್ಲ ನಾಟಕಗಳೂ ಫುಲ್ ಕಾಮಿಡಿಯೇ. ಆ ತಂಡದಲ್ಲಿ ಏಳೆಂಟು ವರ್ಷ ಓಡಾಡಿದ್ನಲ್ಲಾ, ಅಲ್ಲಿ ಪಾತ್ರಗಳನ್ನು ಮಾಡ್ತಾ ಮಾಡ್ತಾ ತಂತಾನೆಯೇ ಹಾಸ್ಯನಟನಿಗೆ ಬೇಕಾದ ಟೈಮಿಂಗ್ ಗೊತ್ತಾಗ್ತಾ ಹೋಯ್ತು. ಹಾಸ್ಯನಟನಿಗೆ ಟೈಮಿಂಗೇ ಇಂಪಾರ್ಟೆಂಟು. ಟೈಮಿಂಗ್ ಕೊಟ್ಟು ಡೈಲಾಗ್ ಹೊಡಿತೀವಲ್ಲ, ಆಗಲೇ ಕ್ಲಿಕ್ ಆಗೋದು.

◆ **ಸಿನಿಮಾದಲ್ಲಿಯೂ ಹಾಸ್ಯನಟನಾಗಿಯೇ ಮುಂದುವರಿದ್ರಿ...**

'ರಾಮಾ ರಾಮಾ ರೇ' ಸಿನಿಮಾದ ಪಾತ್ರವೇ ಹಾಗಿದೆ. ನನ್ನ ಮ್ಯಾನರಿಸಮ್‌ಗೂ ಹೊಂದಿಕೆ ಆಗಿ, ಆ ಪಾತ್ರ ಚೆನ್ನಾಗಿ ವರ್ಕೌಟ್ ಆಯ್ತು. 'ಆಲ್ ದಿ ಬೆಸ್ಟ್' ನಾಟಕದಲ್ಲಿ ಒಂದು ಮೂಗನ ಪಾತ್ರ ಮಾಡಿದ್ದೆ. ಅದು 'ಮುಗುಳು ನಗೆ' ಸಿನಿಮಾದ ಪಾತ್ರ ಮಾಡಲು ಸಹಾಯಕವಾಯ್ತು. ಅಂದರೆ ಪಾತ್ರಗಳೇ ನನ್ನೊಳಗಿನ ಹಾಸ್ಯನಟನನ್ನು ರೂಪಿಸುತ್ತ ಹೋಗುತ್ತಿವೆ.

◆ **ಕನ್ನಡದ ಹಲವು ಹಾಸ್ಯನಟರು ಒಂದೇ ಪ್ಯಾಟರ್ನ್‌ಗೆ ಸಿಲುಕಿಕೊಂಡು ಒದ್ದಾಡುತ್ತಿರುವಂತೆ ಕಾಣುತ್ತದೆ. ಇದೊಂದು ಅಪಾಯ ಅನಿಸುವುದಿಲ್ಲವೇ ನಿಮಗೆ?**

ಖಂಡಿತ ಹೌದು. ಒಂದೇ ಪ್ಯಾಟರ್ನ್ ಪಾತ್ರಗಳಲ್ಲಿ ನಟಿಸುವುದಾದರೆ ಈಗಾಗಲೇ ನಾನು ಒಂದಿಪ್ಪತ್ತು ಸಿನಿಮಾಗಳಲ್ಲಿ ನಟಿಸಿಬಿಡುತ್ತಿದ್ದೆ. ಈಗ ಬಿಡುಗಡೆಯಾಗಿರುವ ಎರಡು ಮೂರು ಸಿನಿಮಾಗಳಲ್ಲಿ ಬೇರೆ ಬೇರೆ ರೀತಿಯ ಪಾತ್ರಗಳನ್ನೇ ಮಾಡಿದ್ದೀನಿ. ಮುಂದೆ ಬಿಡುಗಡೆಯಾಗಲಿರುವ ಏಳೆಂಟು ಸಿನಿಮಾಗಳನ್ನು ನೋಡಿದರೆ ನನ್ನ ಆಯ್ಕೆಯ ಕುರಿತು ನಿಮಗೂ ನಂಬಿಕೆ ಬರುತ್ತದೆ. 'ಇನ್‌ಸ್ಪೆಕ್ಟರ್ ವಿಕ್ರಮ್'ನಲ್ಲಿ ಪೇದೆಯಾಗಿ, 'ಲಂಬೋದರ'ದಲ್ಲಿ ಪಡ್ಡೆ ಹುಡುಗನಾಗಿ, 'ಸ್ಟ್ರೈಕರ್'ನಲ್ಲಿ ಗ್ಯಾರೇಜಲ್ಲಿ ಕೆಲಸ ಮಾಡುವ ಹುಡುಗ, 'ಅಳಿದು ಉಳಿದವರು' ಚಿತ್ರದಲ್ಲಿ ಪತ್ರಕರ್ತ ಹೀಗೆ ಒಂದಕ್ಕಿಂತ ಒಂದು ಭಿನ್ನವಾಗಿವೆ.

ಪಾತ್ರದೊಳಗೆ ಕಾಮಿಡಿ ಮಾಡಲು ಟ್ರೈ ಮಾಡುತ್ತೇನೆಯೇ ಹೊರತು ಕಾಮಿಡಿಗಾಗಿಯೇ ಒಂದು ಕ್ಯಾರೆಕ್ಟರು ಇಡುವುದು ನನಗಿಷ್ಟವಿಲ್ಲ. ಇಡೀ ಕಥೆಯ ಒಳಗೆ ಸಹಜವಾಗಿ ಕಾಮಿಡಿ ಬರಬೇಕು. ನನಗೋಸ್ಕರ ಕಾಮಿಡಿ ದೃಶ್ಯಗಳನ್ನು ಇರಿಸುವುದು ಸುತಾರಾಂ ಇಷ್ಟವಿಲ್ಲ. ಕಥೆ ಬಿಟ್ಟು ನನ್ನ ಕಾಮಿಡಿ ಇರುವುದು ನಂಗೆ ಬೇಕಿಲ್ಲ.

◆ **ನಿಮಗೆ ಎಮೋಷನಲ್ ಪಾತ್ರ, ಆ್ಯಕ್ಷನ್ ಪಾತ್ರದಲ್ಲಿ ಕಾಣಿಸಿಕೊಳ್ಳಬೇಕು ಅನಿಸಿಲ್ಲವೇ?**

ಖಂಡಿತ. ವೈಯಕ್ತಿಕವಾಗಿಯೂ ನಾನು ಬಹುಬೇಗ ಎಮೋಷನಲ್ ಆಗಿಬಿಡ್ತೀನಿ. ಅಂಥದ್ದೇ ಒಂದು ಭಾವುಕ ಪಾತ್ರದಲ್ಲಿ ನಟಿಸುವ ಅವಕಾಶ ಬಂದಿದೆ. ಸದ್ಯದಲ್ಲಿಯೇ ಅಂಥ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತೀನಿ. ಅಲ್ಲಿ ನೀವು ಬೇರೆಯೇ ಧರ್ಮಣ್ಣನನ್ನು ನೋಡ್ತೀರಿ.

◆ **ಹೀರೊ ಆಗುವ ಆಸೆ ಇಲ್ಲವಾ?**

ಎರಡು ಮೂರು ಅವಕಾಶಗಳು ಬಂದಿತ್ತು. ಸದ್ಯಕ್ಕೆ ಬೇಡ ಎಂದು ನಾನೇ ನಿರ್ಧರಿಸಿದ್ದೇನೆ. ನನಗೆ ಹೊಂದುವಂಥ ಪಾತ್ರ ಇದ್ದರೆ ಪರವಾಗಿಲ್ಲ. ಬರೀ ಬಿಲ್ಡಪ್ಪುಗಳೆಲ್ಲ ನಂಗಾಗಲ್ಲ. ನಮ್ ಯೋಗ್ಯತೆ ನಮಗೆ ಗೊತ್ತಿರಬೇಕು ಫಸ್ಟು. ನಮ್ ತಪ್ಪುಗಳು ನಮಗೆ ಗೊತ್ತಿದ್ದರೆ ಸರಿ ಮಾಡೋಕೆ ಈಸಿಯಾಗುತ್ತದೆ. ಎಲ್ಲವೂ ಸರಿಯೇ ಅಂದುಕೊಂಡು ಹೋದರೆ ಸಿಕ್ಕಾಪಟ್ಟೆ ತಪ್ಪುಗಳಾಗಿಬಿಡುತ್ತವೆ.

◆ **ರಿಯಲ್ ಲೈಫಲ್ಲಿ ಧರ್ಮಣ್ಣ ಹೇಗೆ?**

ಬಡ ರೈತರ ಕುಟುಂಬ ನಮ್ಮದು. ಅಲ್ಲಿಯೇ ಸಾಕಷ್ಟು ಕಷ್ಟ ನೋಡಿದ್ದೇನೆ. ನೂರು ರೂಪಾಯಿ ಆಗ ನಮ್ಮ ಪಾಲಿಗೆ ದೊಡ್ಡ ಮೊತ್ತವಾಗಿತ್ತು. ಹಾಗೆ ಬೆಳೆದುಬಂದಿರುವುದರಿಂದ ಈಗ ನಟನಾಗಿ ಗುರ್ತಿಸಿಕೊಂಡಿರುವುದು, ಹೆಸರು ಗಳಿಸಿರುವುದು ಖುಷಿಕೊಡುತ್ತದೆ. ಸಣ್ಣ ಸಣ್ಣ ಸಂಗತಿಗಳಲ್ಲಿಯೇ ಖುಷಿ ಕಾಣುವವನು ನಾನು, ಅದಕ್ಕೆ ದೊಡ್ಡ ಗೆಲುವಿನ ಅಗತ್ಯ ಇಲ್ಲ. ಖುಷಿಪಡಲು ಅರಮನೆ ಬೇಕಿಲ್ಲ; ಇದ್ದಲ್ಲೇ ಖುಷಿ ಕಂಡುಕೊಳ್ಳಬೇಕು ಎನ್ನುವುದು ನನ್ನ ನಂಬಿಕೆ. ■